# ಸಿರಿಯ ಶೃಂಗಾರ

ರಾಜ್ಯಾಧಿಕಾರದ ಮೋಹ ಎಂಬುದು ಎಂತಹ ಹೃದಯದವರನ್ನೂ ಅಂಧರನ್ನಾಗಿ ಮಾಡುತ್ತದೆ. ಬಂಧು, ಬಳಗ, ಅಣ್ಣ, ತಮ್ಮ, ತಂದೆ–ಮಕ್ಕಳ ನಡುವೆಯೇ ಕಲಹವನ್ನು ತಂದೊಡ್ಡುತ್ತದೆ. ಜಗತ್ತಿನ ಪ್ರಭುತ್ವಗಳ ಚರಿತ್ರೆಯನ್ನು ಒಮ್ಮೆ ತಿರುವಿದರೆ ಇಂತಹ ಸಾವಿರಾರು ಘಟನೆಗಳು ಕಣ್ಣಮುಂದೆ ನಿಲ್ಲುತ್ತವೆ. ಮಹಾಭಾರತದ ಕತೆಯೂ ಇದೇ ಬಗೆಯದು. ರಾಜ್ಯಾಧಿಕಾರಕ್ಕಾಗಿ ಒಂದೇ ಕುಟುಂಬದಲ್ಲಿ ನಡೆಯುವ ಸಂಘರ್ಷವೇ ಇದರ ಮೂಲ ಹಂದರ. ಮೇಲು ನೋಟಕ್ಕೆ ಇದೊಂದು 'ಧರ್ಮ ವಿಜಯ' ಎಂದು ಜನಜನಿತವಾಗಿದ್ದರೂ, ಪಾಂಡವರು ಈ ವಿಜಯವನ್ನು ಪಡೆದಿರುವುದು 'ಅಧರ್ಮ'ದ ಮೂಲಕವೇ! ಕುವೆಂಪು ಅವರ 'ಸ್ಮಶಾನ ಕುರುಕ್ಷೇತ್ರಂ' ಕೃತಿ ಹೇಳುವುದು ಇದೇ ಸತ್ಯವನ್ನು. ಯುದ್ಧಭೂಮಿಯಲ್ಲಿ ತನ್ನವರನ್ನೆಲ್ಲಾ ಕಳೆದುಕೊಂಡ ಕೌರವ ಅಂತ್ಯದಲ್ಲಿ ಹತಾಶೆ ಮತ್ತು ವ್ಯಂಗ್ಯದಿಂದ ಹೇಳುವ ಮಾತು ಭೀಷ್ಮ, ದ್ರೋಣ, ಕರ್ಣ ಇವರೆಲ್ಲರನ್ನೂ ಅಧರ್ಮದಿಂದ ಕೊಂದು, ಕೊನೆಗೆ ಯುದ್ಧದಲ್ಲಿ ತೊಡೆಗೆ ಹೊಡೆದು ನನ್ನ ಕೊಂದವರೂ ಇವರೆ! 'ಇವರೆಲ್ಲರುಂ ಧರ್ಮಿಗಳ್? ನಾನೊರ್ವನ್ ಅಧರ್ಮಿ!' ಎಂದು ಧರ್ಮಯುದ್ಧವನ್ನೇ ಪ್ರಶ್ನಿಸಿದ.

ಧಾರ್ಮಿಕತೆಯ ಸಮನ್ವಯತೆಯ ಧ್ಯಾನದಲ್ಲಿ ಮುಳುಗಿದ್ದ ಅರಸುಗುವರ ದಾರಾಶಿಖೋನನ್ನು ಅವನ ಒಡಹುಟ್ಟಿದ ಸಹೋದರನೇ ಆದ ಔರಂಗಜೇಬನು ಇತರ ಸಹೋದರರನ್ನು ಕೊಂದು, ತಂದೆ ಶಹಜಾನ್‌ನನ್ನು ಆಗ್ರಾದ ಸೆರೆಮನೆಗೆ ದೂಡಿದ. ಆಧ್ಯಾತ್ಮಿಕ ಸಂಗಮದ ಸೂಫಿಯೂ ಆಗಿದ್ದ ದಾರಾಶಿಖೋನನ್ನು ಹಾಡಹಗಲಲ್ಲೇ ಜನತೆಯ ಕಣ್ಣೆದುರಲ್ಲೇ ದೆಹಲಿಯ ಚೌಕವೊಂದರಲ್ಲಿ ಗಲ್ಲಿಗೇರಿಸಿದ. ಇಂತಹ ಅಸಂಖ್ಯ ರಕ್ತಸಿಕ್ತ ಚರಿತ್ರೆಯೂ ಸಿಂಹಾಸನಗಳಿಗಂಟಿದೆ.

ಪ್ರಭುತ್ವದ ಇಂತಹ ನಿರ್ದಯೆ ಹಾಗೂ ವಂಚಕತನವನ್ನೇ ಕಂಡ ಯೋಗಿಗಳು, ಸಂತರು, ಶರಣರು, ಸೂಫಿಗಳು ಎಲ್ಲ ಕಾಲದಲ್ಲೂ ಅಧಿಕಾರ ಕೇಂದ್ರಗಳಿಂದ ಮಾರು ದೂರವಿದ್ದರು! ರಾಜರುಗಳಿಂದ ಪಡೆಯಲಾರದನ್ನು ಜನತೆ ಸೂಫಿ, ಸಂತರು, ಶರಣರಿಂದ ಪಡೆದುಕೊಂಡಿತು.

ಒಬ್ಬ ಝೆನ್ ಗುರು ರಾಜನೊಬ್ಬನಿಗೆ ಕತ್ತಿವರಸೆಯನ್ನು ಹೇಳಿಕೊಡುತ್ತಿದ್ದ. ಗುರು ಯಾವಾಗಲೂ ಹರಿದ ಬಟ್ಟೆಗಳನ್ನೇ ತೊಟ್ಟಿರುತ್ತಿದ್ದ. ತನ್ನ ಗುರು ಹೀಗೆ ಹರಿದ ಬಟ್ಟೆಗಳನ್ನೇ ತೊಡುತ್ತಿರುವುದನ್ನು ಕಂಡ ರಾಜ ಅವನಿಗೆ ಕೈತುಂಬಾ ಬಂಗಾರ ಮತ್ತು ತೊಡಲು ಹಲವಾರು ದಿರಿಸುಗಳನ್ನು ನೀಡಿ 'ನಾಳೆಯಿಂದ ತಾವು ಹೊಸ ಬಟ್ಟೆ ತೊಟ್ಟು ಬನ್ನಿ' ಎಂದು ಗುರುವಿನಲ್ಲಿ ವಿನಯದಿಂದ ಕೇಳಿಕೊಂಡ.

ಆದರೆ ಮಾರನೆ ದಿನ ಗುರು ಮತ್ತೆ ಅದೇ ಹರಿದ ಬಟ್ಟೆಗಳನ್ನೇ ತೊಟ್ಟು ಅರಮನೆಗೆ ಬಂದ. ರಾಜನಿಗೆ ತನ್ನ ಗುರು ಮತ್ತೆ ಹೀಗೆಯೇ ಬಂದದ್ದನ್ನು ಕಂಡು 'ಏಕೆ ತಾವು ಹೊಸ ಬಟ್ಟೆಗಳನ್ನು ತೊಡಲಿಲ್ಲವೇ?' ಎಂದು ಕೇಳಿದ. ಅದಕ್ಕೆ ಗುರು 'ರಾಜನೆ, ನಿಮ್ಮ ರಾಜ್ಯದಲ್ಲಿ ನನಗಿಂತ ಹೀನ ಸ್ಥಿತಿಯಲ್ಲಿದ್ದ ಬಡವರನ್ನು ಕಂಡೆ. ನೀವು ಕೊಟ್ಟ ಬಂಗಾರ ಮತ್ತು ದಿರಿಸುಗಳು ನನಗಿಂತ ಅವರಿಗೇ ಹೆಚ್ಚು ಅವಶ್ಯವಿದ್ದವು. ಆದ್ದರಿಂದ ಅವರಿಗೆ ಅದೆಲ್ಲವನ್ನೂ ಕೊಟ್ಟುಬಿಟ್ಟೆ' ಎಂದು ಹೇಳಿದ.

ಗುರುವಿನ ಮಾತು ಕೇಳಿ ರಾಜ ತಲೆತಗ್ಗಿಸಿದ.

ಮಾನವೀಯತೆ, ಧಾರ್ಮಿಕ ಹಾಗೂ ಸಾಮಾಜಿಕ ಸಮನ್ವಯತೆಯನ್ನೇ ಆರಾಧಿಸುತ್ತಿದ್ದ ಇಂತಹ ಸಂತರನ್ನೇ ಮನುಕುಲದ ಚರಿತ್ರೆ ಚಕ್ರವರ್ತಿಗಳಿಗಿಂತ ಮಿಗಿಲಾಗಿ ತನ್ನೊಳಗೆ ಜತನದಿಂದ ಕಾಪಾಡಿಕೊಂಡಿದೆ. ಬುದ್ಧ, ಏಸು ಇವರೆಲ್ಲ ಯಾವ ರಾಜ್ಯವನ್ನೂ ಗೆಲ್ಲದೆ ಇಂದಿಗೂ ಜನತೆಯ ಹೃದಯವನ್ನಾಳುತ್ತಿರುವ ನಿಜವಾದ ಸಿಂಹಾಸನಾಧೀಶ್ವರರು.

ಅನಿತ್ಯವೂ ಹಾಗೂ ಅಶಾಶ್ವತವೂ ಆದ ರಾಜ್ಯಾಧಿಕಾರದ ಮೋಹ ಎಂಬುದು ಆರಂಭದಲ್ಲಿ 'ಸಿಹಿ'ಯಾಗಿದ್ದು ಅದರ ಅಂತ್ಯ 'ಕಹಿ'ಯಾಗಿರುತ್ತದೆ, ಇಂದ್ರಿಯ ಸುಖದಲ್ಲಿ ತೊಡಗಿರುವುದೇ ಸುಖವಲ್ಲವೆಂದೂ, ಅತೀಂದ್ರಿಯ ಸುಖವೇ ನಿಜವಾದ ಸುಖವೆಂದು ಪಂಪ ತನ್ನ 'ಆದಿಪುರಾಣ'ದಲ್ಲಿ ಹೇಳುತ್ತಾನೆ. ಆದರೂ ಅಧಿಕಾರದ ಮೇಲಿನ ಮೋಹದಿಂದಾಗಿ ನೈತಿಕತೆಯನ್ನು ತೊರೆದ ಮನುಷ್ಯ ಅಧಿಕಾರಕ್ಕಾಗಿ ಲಜ್ಜೆಬಿಟ್ಟು 'ಅಧಿಕಾರ ಶಾಶ್ವತ'ವೆಂಬ ಹುಂಬ ತಿಳಿವಿನಿಂದ ಹಿಂಸಾ ರಭಸಮತಿಯಾಗಿ ವರ್ತಿಸುತ್ತಾನೆ ಎನ್ನುವುದು ಸಾರ್ವಕಾಲಿಕ ನಿಜವೇ ಆಗಿಬಿಟ್ಟಿದೆ! ವರ್ತಮಾನದ ರಾಜಕಾರಣದ ವಿದ್ಯಮಾನಗಳನ್ನು ನೋಡಿದರೆ, ಅಧಿಕಾರದ ಲಾಲಸೆಯಿಂದ ಬಂಧು, ಬಳಗ, ಕೊನೆಗೆ ಜನಹಿತವನ್ನೂ ಕಡಗಣಿಸಿ 'ಅಪಕೀರ್ತಿ ನಾರಿಯ ಸೆರುಗು' ಹಿಡಿಯುವವರ ದಂಡೇ ಹೆಚ್ಚಾಗುತ್ತಿದೆ. 'ಸೋದರರೊಳ್ ಸೋದರರಂ /ಕಾದಿಸುವುದು ಸುತನ ತಂದೆಯೆಡೆಯೊಳ್ ಬಿಡದು....' ಅಧಿಕಾರ ಮತ್ತು ಸಂಪತ್ತು ಮಾನವೀಯ ಸಂಬಂಧಗಳನ್ನು ನಾಶಮಾಡುತ್ತವೆ ಎಂಬುದನ್ನು ಅರಿತ ಬಾಹುಬಲಿಯ ಮಾತುಗಳು ಚಕ್ರವರ್ತಿಗಳಿಗಿರುವ ಅಧಿಕಾರದ ಮೋಹವನ್ನು ನಿಷ್ಕರುಣೆಯಿಂದ ಕಳಚುತ್ತದೆ! ರಾಜರುಗಳಿಗಿರುವ ಅಧಿಕಾರದ ಮೋಹದ ಲಕ್ಷಣವೆಂದರೆ, ಅದರ ವಿವೇಕಹೀನವಾದ ಅಮಾನವೀಯವರ್ತನೆ ಮತ್ತು ನಿರಂಕುಶ ಅಧಿಕಾರ. ಸಾಹಿತ್ಯವು ಜನತೆ ಅನುಭವಿಸುವ ಮೂಕ ರೋದನದ ಅಭಿವ್ಯಕ್ತಿಯಾದಾಗ ಮಾನವ ಕರುಣೆಯೇ ಪ್ರಧಾನವಾಗಿರುವ ಇಂತಹ ಸಂವೇದನಾಶೀಲ ಪ್ರಯೋಗಗಳು ಎಲ್ಲ ಭಾಷೆಯಲ್ಲೂ ಕಂಡುಬರುತ್ತವೆ.

ಸಿಂಹಾಸನಕ್ಕಂಟಿರುವ ನೆತ್ತರಿನ ಶಾಶ್ವತ ಕಲೆಗಳನ್ನೇ ಕುರಿತು 'ಅರಸು ವಿಚಾರ, ಸಿರಿಯ ಶೃಂಗಾರ ಸ್ಥಿರವಲ್ಲ ಮಾನವ...' ಎಂದು ರಾಜಕೀಯ ದಾರ್ಶನಿಕನಂತೆ ಬಸವಣ್ಣ ಹೇಳಿದ. ರಕ್ತದ ರುಚಿ ಕಂಡ ರಾಜ್ಯಾಧಿಕಾರವು ಹಿಂಸೆ, ಕ್ರೌರ್ಯ ಹಾಗೂ ನಿರ್ದಯೆಗಳ ಆಯುಧಗಳಿಂದ ಬಲವಾದ ಕೋಶಾವರಣವನ್ನು ಸೃಷ್ಟಿಸಿಕೊಂಡಿರುತ್ತದೆ. ಒಮ್ಮೆ ಅಧಿಕಾರದ ಕೋಶಾವರಣವನ್ನು ಪ್ರವೇಶಿಸಿದವನು ಮತ್ತೆ ಹೊರಬರಲಾರ! ಈ ಆವರಣದಲ್ಲೇ ಅವನ ಅಧಿಕಾರ ಮತ್ತು ಲಯ ಎರಡೂ ನಿಶ್ಚಯವಾಗಿರುತ್ತದೆ. ಅದಕ್ಕೆಂದೇ 'ನೆಲನಾಳ್ದನ ಹೆಣನೆಂದರೆ ಒಂದಡಕೆಗೆ ಕೊಂಬುವರಿಲ್ಲ!' ಎಂದು ಬಸವಣ್ಣ ಕಠೋರವಾಗಿ ಹೇಳಿದ್ದು. ಎಲ್ಲ ಕಾಲದ ರಾಜ್ಯಾಧಿಕಾರದ ಬರ್ಬರತೆಯನ್ನು ಒಳಗೊಂಡ, ಎಲ್ಲ ಕಾಲದ ವಿವೇಕದ ಕಾವ್ಯ ಇದು! ಹೀಗೆ ಪ್ರಭುತ್ವದ ನಿರರ್ಥಕತೆಯನ್ನು ಭಾಷೆಯಲ್ಲಿ ಕಟ್ಟಿಕೊಡುವ ದಿಟ್ಟ ನಿಲುವನ್ನು ವ್ಯಕ್ತಪಡಿಸುವ ಕವಿಗಳು ಮಾನವ ಸ್ವಾತಂತ್ರ್ಯದ ವ್ಯಾಖ್ಯಾನುಕಾರರು.

**■ ಜಿ.ವಿ. ಆನಂದಮೂರ್ತಿ**

## ಮಾತೇ ಮುತ್ತು

- ಬಾಲ್ಯದಲ್ಲಿ ಕಲಿತದ್ದೇ ಬದುಕಿನಲ್ಲಿ ಉಳಿಯುವುದರಿಂದ ಮಕ್ಕಳಿಗೆ ಕನ್ನಡ ಸಂಸ್ಕಾರ ಕಲಿಸಬೇಕು.

  —ಚೆನ್ನವೀರ ಕಣವಿ
- ಅಸತ್ಯಕ್ಕೆ ಅನಂತ ರೂಪಗಳಿವೆ, ಆದರೆ ಸತ್ಯಕ್ಕೆ ಇರುವುದು ಒಂದೇ ರೂಪ.

  —ಗಳಗನಾಥ
- ಪರಿಸ್ಥಿತಿಗಳನ್ನು ಹಾಗೆಯೇ ಬಿಟ್ಟುಬಿಟ್ಟರೆ ಅದು ಎಂದಿಗೂ ಸರಿ ಹೊಂದುವುದಿಲ್ಲ.

  —ಚದುರಂಗ
- ಖುಷಿಯಿಂದ ಬದುಕಿ, ಘನತೆಯಿಂದ ಸಾವನ್ನಪ್ಪಿ.

  —ಬಿ.ಕೆ.ಎಸ್. ಅಯ್ಯಂಗಾರ್
- ಬಾಳುವಷ್ಟು ಕಾಲವೂ ಕಲಿಯುತ್ತಲೇ ಇರಬೇಕು.

  —ತೀ.ನಂ.ಶ್ರೀ.
- ಜನರನ್ನು ನೀತಿಮಾರ್ಗದಲ್ಲಿ ಬೆಳೆಸಿ ತಂದಿರುವುದು ಭಗವಂತನ ಬಗೆಗೆ ಭಯ ಮತ್ತು ಪ್ರೀತಿ. ಆದ್ದರಿಂದ ದೇವರಿಲ್ಲದೆ ಮನುಷ್ಯ ಬದುಕಲಾರ.

  —ಡಿ.ವಿ. ಗುಂಡಪ್ಪ
- ಸಂಸಾರ ಎಂಬ ಮರಕ್ಕೆ ಬಂಧುಗಳ ದರ್ಶನವೇ ಫಲ.

  —ಕುಮಾರವ್ಯಾಸ
- ನಾನು ಬರೆಯುತ್ತೇನೆ ನಿಂತ ನೀರಾಗದೆ ಮುಂದಕ್ಕೆ ಹರಿಯುವುದಕ್ಕೆ, ಎಲ್ಲದರ ಜತೆ ಬೆರೆಯುವುದಕ್ಕೆ.

  —ಜಿ.ಎಸ್. ಶಿವರುದ್ರಪ್ಪ